ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 140/2024
ಪಿ.ಡಬ್ಲ್ಯೂ : 1

ದಿನಾಂಕಃ 29-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಮಾನ್ಯ ಶ್ರೀ ಎ.ಜಿ.ಪಿ.ಯವರಿಂದ

1. ನನ್ನ ಮಗನ ಶಾಲೆಯ ವಿದ್ಯಾಭ್ಯಾಸ ಶಿರೂರಿನ ಸರ್ಕಾರಿ ಶಾಲೆಯಲ್ಲಿ ಆಗಿರುತ್ತದೆ. ಸದರಿ ಶಾಲೆಯ ದಾಖಲಾತಿಯನ್ನು ನ್ಯಾಯಲಯಕ್ಕೆ ಕೊಟ್ಟಿರಬಹುದು. ಪುರಸಭೆ ಮುಖ್ಯಾಧಿಕಾರಿಯವರಿಗೆ ನನ್ನ ಮಗನ ಹೆಸರಿನ ಬಗ್ಗೆ ಅರ್ಜಿ ಕೊಟ್ಟಿದ್ದು ನಾನೇ. ಸದರಿ ಅರ್ಜಿಯನ್ನು ನ್ಯಾಯಲಯಕ್ಕೆ ಕೊಟ್ಟಿರುತ್ತೇನೆ. ನನ್ನ ಮಗನ ಜನನ ದಿನಾಂಕ ಮೇ 8 1987. ನನ್ನ ಮಗ ಹುಟ್ಟಿ ಪುರಸಭೆಗೆ 10 ವರ್ಷದ ನಂತರ ಅರ್ಜಿ ಕೊಟ್ಟಿರುತ್ತೇನೆ.

2. ಜನನ ಪ್ರಮಾಣ ಪತ್ರದಲ್ಲಿ ನನ್ನ ಮಗನ ಹೆಸರು ನಮೂದು ಮಾಡಿಸಿರುತ್ತೇನೆ. ಪಿ.ವಿ ಅನಿಶ್ ಎಂದು ಅರ್ಜಿ ಕೊಟ್ಟಿರುತ್ತೇನೆ. ಅನಿಶ್ ವಂತಿಲಿಲ್ ವರ್ಗೀಸ್ ತಂದೆಯ ಹೆಸರು ವರ್ಗೀಸ್ ಪಿ ಕೆ, ತಾಯಿಯ ಹೆಸರು ಅಣ್ಣಮ್ಮ ಪಿ ವಿ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ನಿ.ಪಿ.2 ರಲ್ಲಿ ತಾಯಿಯ ಹೆಸರು ಶೋಭಾ, ತಂದೆಯ ಹೆಸರು ಜೋಯಿ ಅಂತ ಇರುತ್ತದೆ ಎಂದರೆ ಸರಿ.

3. ನನ್ನ ಮಗ ಕುಂದಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಹುಟ್ಟಿರುತ್ತಾನೆ. ಆಸ್ಪತ್ರೆಯ ದಾಖಲೆಯನ್ನು ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ಅದು ಯಾವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ. 2 ಕ್ಕೂ ಹಾಗೂ ನಮಗೂ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಶೋಭಾ ಹಾಗೂ ಜೋಯಿ ಎಂಬ ಹೆಸರಿನ ಸುಳ್ಳು ಜನನ ಪ್ರಮಾಣ ಪತ್ರ ಕೊಟ್ಟು ನ್ಯಾಯಲಯಕ್ಕೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹಾಜರು ಪಡಿಸಿದ ಯಾವುದೇ ದಾಖಲೆಗಳು ಪ್ರಕರಣಕ್ಕೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

4. ನನ್ನ ಮಗ ಸರ್ಕಾರಿ ಆಸ್ಪತ್ರೆಯಲ್ಲಿ ಜನಿಸಿರುವ ಬಗ್ಗೆ ನ್ಯಾಯಲಯದಲ್ಲಿ ನಿಶಾನೆಗೊಳಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆ ಯಾವ ದಾಖಲೆಗಳು ಇದೆ ಎಂದರೆ ಸಾಕ್ಷಿ ಶಾಲಾ

ದಾಖಲೆಗಳು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಗನ ಪಾಸ್ ಪೋರ್ಟ್ ಮಾಡಿಸುವ ಸಲುವಾಗಿ ನಿ.ಪಿ. 2 ನ್ನು ದುರುಪಯೋಗ ಪಡಿಸಿಕೊಂಡು ನ್ಯಾಯಲಯಕ್ಕೆ ಮೋಸ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿಗಳಿಗೆ ಯಾವುದೇ ನೋಟಿಸು ಕೊಟ್ಟಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಪ್ರಕರಣ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನ್ಯಾಯಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ